ದಿನಾಂಕ : 01/09/2022 ರಂದು ಸಾಕ್ಷಿದಾರರಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿ ಪರ : ಶ್ರೀ ಬಿಎಸ್ ಎನ್., ವಕೀಲರಿಂದ:**

1982 ರಲ್ಲಿ ನನ್ನ ತಂದೆ ಹಾಗೂ ಉಳಿದವರ ನಡುವೆ ಆಗಿರುವ ವಿಭಾಗ ಪತ್ರ ಅವರ ಒಪ್ಪಿಗೆಯ ಮೇರೆಗೆ ಆಗಿರುತ್ತದೆ ಎಂದರೆ ಸರಿ. ಯಾವ ಯಾವ ಜಮೀನುಗಳನ್ನು ಪಡೆದುಕೊಂಡಿದ್ದರೋ ಅವುಗಳ ಚೆಕ್ಕುಬಂಧಿಗಳು ಸದರಿ ಹಿಸ್ಸಾ ಪತ್ರದಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಬರೆದಿರುವ ಚೆಕ್ಕುಬಂಧಿಗಳ ಪ್ರಕಾರ ಎಲ್ಲರೂ ಅವರವರ ಭಾಗಗಳಲ್ಲಿ ಇದ್ದು ಸ್ವಾಧೀನವನ್ನು ಹೊಂದಿಕೊಂಡು ಬಂದಿರುತ್ತಾರೆ ಎಂದರೆ ಸರಿ.

2000 ದ ಒಳಗಡೆ ನನ್ನ ತಂದೆ ಮರಣಹೊಂದಿರುತ್ತಾರೆ. ನನ್ನ ತಂದೆಯವರು ಮರಣ ಹೊಂದುವ ಮೊದಲು ಅವರ ಭಾಗಕ್ಕೆ ಬಂದಿರುವ ಆಸ್ತಿಗಳನ್ನು ಯಾವುದೇ ಪ್ರಕಾರದಲ್ಲಿ ದಾಖಲಾತಿಗಳನ್ನು ಮಾಡಿ ವಿಲೇ ಮಾಡಿರುವುದಿಲ್ಲ ಎಂದರೆ ಸರಿ.

ದಾವಾಸ್ವತ್ತಿನ ಎ ಶೆಡ್ಯೂಲ್ ಮನೆಯು ನನ್ನ ತಾಯಿಯ ಹೆಸರಿನಲ್ಲಿ ಯಾವಾಗ ಆಗಿರುತ್ತದೆ ಎಂದು ನನಗೆ ಸರಿಯಾಗಿ ನೆನಪಿಲ್ಲ. ಸದರಿ ಮನೆಗೆ ವಿದ್ಯುತ್ ಬಿಲ್ ಗಳು ಇವೆ. ಸದರಿ ಮನೆಗೆ ವಿದ್ಯುತ್ ನ ಒಂದೇ ಮೀಟರ್ ಇದೆ, ಅದು ನನ್ನ ಅಣ್ಣನ ಹೆಸರನಲ್ಲಿದೆ. ನನ್ನ ತಂದೆ ಇದ್ದಾಗ ಸದರಿ ಮನೆಗೆ ವಿದ್ಯುತ್ ಸಂಪರ್ಕ ಇತ್ತು. ಆ ಸಮಯದಲ್ಲಿ ಮನೆಯ ವಿದ್ಯುತ್ ನ ಮೀಟರ್ ರತ್ನಾಕರ ಅವರ ಹೆಸರಿನಲ್ಲೇ ಇತ್ತು. ರತ್ನಾಕರ ಅವರ ಹೆಸರಿನಲ್ಲಿ ವಿದ್ಯುತ್ ಮೀಟರನ್ನು ಪಡೆದುಕೊಳ್ಳುವಾಗ ಯಾವ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸದರಿ ಮನೆಯ ಸುತ್ತ ಇರುವ ಯಾವುದೇ ಕೊಟ್ಟಿಗೆಗಳಿಗೂ ವಿದ್ಯುತ್ ಸಂಪರ್ಕ ವಿಲ್ಲ ಎಂದರೆ ಸಾಕ್ಷಿಯು ಮನೆಯ ಮಧ್ಯಭಾಗದಲ್ಲಿರುವ ಕೊಟ್ಟಿಗೆಗೆ ಮಾತ್ರ ವಿದ್ಯುತ್ ಸಂಪರ್ಕವಿದೆ ಎನ್ನುತ್ತಾರೆ. ಮನೆಯ ಮೀಟರ್ ನಿಂದಲೇ ಸದರಿ ಕೊಟ್ಟಿಗೆಗೆ ವಿದ್ಯುತ್

ಸಂಪರ್ಕ ನೀಡಲಾಗಿರುತ್ತದೆ.

ಸದರಿ ಮನೆಯಿಂದ ರಾಮಣ್ಣನವರ ಮನೆಗೆ ಕೂಡಾ ವಿದ್ಯುತ್ ಸಂಪರ್ಕವನ್ನು ನೀಡಲಾಗಿರುತ್ತದೆ ಎಂದರೆ ರಾಮಣ್ಣನವರು ಅಲ್ಲಿ ಇರುವುದಿಲ್ಲ ಎನ್ನುತ್ತಾರೆ. ರಾಮಣ್ಣನವರು ಸದರಿ ಮನೆಯಲ್ಲಿ ಇಲ್ಲ ಎಂದು ಮಾಹಿತಿಯನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ.

ನಮ್ಮ ವಕೀಲರು ಪ್ರತಿವಾದ ಪತ್ರದಲ್ಲಿ ರಾಮಣ್ಣನವರು ಸದರಿ ಮನೆಯಲ್ಲಿ ಅನುಮತಿಯ ಮೇರೆಗೆ ವಾಸವಿದ್ದಾರೆ ಎಂದು ಬರೆದಿದ್ದಾರೆ ಎಂದರೆ ತಪ್ಪು ಬರೆದಿರುತ್ತಾರೆ ಎನ್ನುತ್ತಾರೆ. ನೀವು ನಿಮ್ಮ ವಕೀಲರಿಗೆ ಸದರಿ ಮನೆಯಲ್ಲಿ ರಾಮಣ್ಣನವರು ಅನುಮತಿಯ ಮೇರೆಗೆ ವಾಸವಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ನೀಡಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ.

ಎ ಶೆಡ್ಯೂಲ್ ದಾವಾ ಆಸ್ತಿಯಲ್ಲಿ ರಾಮಣ್ಣನವರು ಒಂದು ಭಾಗದಲ್ಲಿ ಹಾಗೂ ಮಹಡಿ ಭಾಗದಲ್ಲಿ ನನ್ನ ತಂದೆಯ ಕಾಲದಿಂದ ವಾಸವಿದ್ದು ಇಲ್ಲಿಯವರೆಗೂ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಮನೆಯ ಮುಂಭಾಗದ ಎಡಭಾಗದಲ್ಲಿ ನನ್ನ ತಂದೆ ಒಂದು ಕಣವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕಣದ ಬಗ್ಗೆ ವಿಭಾಗಪತ್ರದಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಮನೆಯ ಸುತ್ತ ಒಟ್ಟು 7 ಕೊಟ್ಟಿಗೆಗಳು ಇವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು 3 ಕೊಟ್ಟಿಗೆಗಳು ಇವೆ ಎನ್ನುತ್ತಾರೆ.

ನಿಪಿ.7 ರ ಭಾವಚಿತ್ರದಲ್ಲಿ ಮನೆಯ ಮುಂಭಾಗದಲ್ಲಿ ಒಂದು ಕೊಟ್ಟಿಗೆಯಿದೆ ಎಂದರೆ ಸಾಕ್ಷಿಯು ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ನನ್ನ ತಂದೆಯ ಕಾಲದಿಂದ ಗದ್ದೆ ಇತ್ತು ಹಾಗೂ ಈಗಲೂ ಕೂಡಾ ನಾವು ಗದ್ದೆ ಮಾಡಿಕೊಂಡು ಬರುತ್ತಿದ್ದೇವೆ. ನಮ್ಮ ತಂದೆಯ ಕಾಲದಲ್ಲಿ ಅವರು ವ್ಯವಸಾಯ ಮಾಡುತ್ತಿದ್ದರು ಆದರೆ ಒಕ್ಕಲಾಟ ಮಾಡುತ್ತಿರಲಿಲ್ಲ. ಒಕ್ಕಲಾಟ ಮಾಡುವ ಪ್ರಕ್ರಿಯೆಯನ್ನು ನಾನು ನೋಡಿರುತ್ತೇನೆ. ಗದ್ದೆಗಳಲ್ಲಿ ಭತ್ತವನ್ನು ತೆನೆಯಿಂದ ಬೇರೆ ಮಾಡುವ ಸಮಯದಲ್ಲಿ ಎತ್ತುಗಳನ್ನು ಉಪಯೋಗಿಸಿ ಕಲ್ಲುಗಳನ್ನು ಕಟ್ಟಿ ಮಾಡಿಕೊಳ್ಳುತ್ತಾರೆ ಎಂದರೆ ಸರಿ.

ಭತ್ತವನ್ನು ಹುಲ್ಲಿನಿಂದ ಬೇರ್ಪಡಿಸಲು ಒಂದು ನಿರ್ದಿಷ್ಟವಾದ ಜಾಗವನ್ನು ಕಣ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ನಮ್ಮದು ಯಾವುದೇ ಕಣ ಇರುವುದಿಲ್ಲ, ಅವರವರು ತಮ್ಮ ಜಾಗಗಳಲ್ಲಿ ಕಣವನ್ನು ಮಾಡಿಕೊಂಡಿರುತ್ತಾರೆ. ರಾಮಣ್ಣನವರು ಮಾಡಿಕೊಂಡಿರುವ ಕಣದಲ್ಲಿ ನಮ್ಮದು ಯಾವುದೇ ತಕರಾರು ಇಲ್ಲವೆಂದರೆ ಸರಿ.

ನನ್ನ ಸರ್ವೆ ನಂಬರ್ 25 ಅನ್ನು ನಾನು ಸರ್ವೆ ಮಾಡಿಸಿಕೊಂಡು, ಅಳತೆ ಮಾಡಿಸಿಕೊಂಡು ಗಡಿ ಭಾಗಗಳನ್ನು ಗುರುತಿಸಿರುತ್ತೇನೆ ಎಂದರೆ ಸರಿ. ನನಗೆ ಬಂದಿರುವ ಒಂದು ಎಕರೆ, 19 ಗುಂಟೆ ಮೂಲತಃ ತರಿ ಜಮೀನು ಎಂದರೆ ಮೊದಲು ತರಿ ಇತ್ತು, ನಾನು ಈಗ ಭಾಗಾಯ್ತು ಮಾಡಿರುತ್ತೇನೆ. ಸದರಿ ಜಮೀನು ತರಿ ಹಾಗೂ ಭಾಗಾಯ್ತು ಜಮೀನಾಗಿರುತ್ತದೆ. ಸದರಿ ಜಮೀನಿನಲ್ಲಿ ಎಷ್ಟು ತರಿ ಹಾಗೂ ಎಷ್ಟು ಭಾಗಾಯ್ತು ಇದೆ ಎಂದರೆ ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಅಡಿಕೆ ಸಸಿಗಳು ಸುಮಾರು 200 ರ ಮೇಲಿವೆ, ಲೆಕ್ಕ ಮಾಡಿರುವುದಿಲ್ಲ. ಒಂದು ಅಡಿಕೆ ಸಸಿಯಿಂದ ಇನ್ನೊಂದು ಅಡಿಕೆ ಸಸಿಯಲ್ಲಿ ಎಷ್ಟು ಪಟ್ಟೆ ಅಂತರವಿದೆ ಎಂದರೆ ನಾನು ಲೆಕ್ಕ ಮಾಡಿರುವುದಿಲ್ಲ. ಒಂದು ಅಡಿಕೆ ಸಸಿಯಿಂದ ಇನ್ನೊಂದು ಅಡಿಕೆ ಸಸಿ ಅಂದಾಜು 8 ಅಡಿ ಅಂತರದಲ್ಲಿ ಇರಬಹುದು, ನನಗೆ ಸರಿಯಾಗಿ ಹೇಳಲು ಬರುವುದಿಲ್ಲ.

ಸಾಮಾನ್ಯವಾಗಿ ಒಂದು ಎಕರೆ ಜಾಗದಲ್ಲಿ 400 ಅಡಿಕೆ ಸಸಿಗಳನ್ನು ಬೆಳೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಸುಮಾರು 20 ಚೀಲ ಭತ್ತವನ್ನು ಬೆಳೆಯುತ್ತೇವೆ. ಒಂದು ಚೀಲದಲ್ಲಿ 40 ಕೆಜಿ ಇರಬಹುದೇ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ಮಾಡುವ ಸಮಯದಲ್ಲಿ ತರಿ ಜಮೀನು ಎಷ್ಟು, ಭಾಗಾಯ್ತು ಜಮೀನು ಎಷ್ಟು ,ಅಡಿಕೆ ಜಮೀನು ಎಷ್ಟು ಹಾಗೂ ಗದ್ದೆ ಎಷ್ಟು ಎಂದು ನಮೂದು ಮಾಡಿಲ್ಲ. ಸರ್ವೆ ಮಾಡುವ ಸಮಯದಲ್ಲಿ ತಯಾರಿಸಿದ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೇನಾದರೂ ತೊಂದರೆಯಿದೆಯೇ ಎಂದರೆ ಸಾಕ್ಷಿ ಸಿಕ್ಕಿದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ.

ನಿಪಿ.9 ರ ಭಾವಚಿತ್ರದಲ್ಲಿ ಕೊಟ್ಟಿಗೆ ಇದೆ ಎಂದರೆ ನನಗೆ ಗೊತ್ತಾಗುತ್ತಿಲ್ಲ. ನಿಪಿ.10 ರ ಭಾವಚಿತ್ರದಲ್ಲಿ ಯಾವುದೇ ಕಣ ಕಾಣಿಸುತ್ತಿಲ್ಲ. ನಿಪಿ.12 ರ ಭಾವಚಿತ್ರದಲ್ಲಿ ಕಾಣುತ್ತಿರುವ ಕಣ ನಮ್ಮ ಮನೆ ಹತ್ತಿರ ಇರುವ ಕಣವಿರುತ್ತದೆ. ನಿಪಿ.15 ರ

ಭಾವಚಿತ್ರದಲ್ಲಿ ಕೊಟ್ಟಿಗೆ ಇದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಪಿ.16 ಭಾವಚಿತ್ರದಲ್ಲಿ ಕಾಣಿಸುತ್ತಿರುವ ಕೊಟ್ಟಿಗೆ ಯಾವುದೂ ಇರುವುದಿಲ್ಲ.

ಸರ್ವೆ ನಂಬರ್ 25 ರಲ್ಲಿ ಒಂದು ಎಕರೆ , 19 ಗುಂಟೆ ಹೊರತುಪಡಿಸಿ ಬೇರೆ ಯಾವುದೇ ಜಮೀನುಗಳಿಗೆ ನನ್ನ ಹೆಸರಿನಲ್ಲಿ ಖಾತೆಯಾಗಿರುವುದಿಲ್ಲ ಎಂದರೆ ಸರಿ.

ನಿಪಿ.13 ರ ಭಾವಚಿತ್ರದಲ್ಲಿ ಕಾಣಿಸಿರುವ ಮನೆಯಲ್ಲಿ ನನ್ನ ತಂದೆ-ತಾಯಿ ವಾಸವಿದ್ದರು ಎಂದರೆ ಸರಿಯಲ್ಲ. ಸದರಿ ಮನೆಯನ್ನು ಕಟ್ಟುವ ಪೂರ್ವದಲ್ಲಿ ಗ್ರಾಮ ಪಂಚಾಯಿತಿಯಿಂದ ಅಥವಾ ತಹಸಿಲ್ದಾರ್ ಅವರಿಂದ ನೀವೇನಾದರೂ ಅನುಮತಿ ಪಡೆದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಜಮೀನು ನನ್ನ ಜಮೀನಾಗಿದ್ದರಿಂದ ನಾನು ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ ಎನ್ನುತ್ತಾರೆ. ಸದರಿ ಮನಯು ಸರ್ವೆ ನಂಬರ್ 25 ರಲ್ಲಿ ಒಂದು ಎಕರೆ, 19 ಗುಂಟೆಯಲ್ಲಿ ಬರುತ್ತದೆ ಎಂದು ಗಡಿ ಗುರುತಿಸಿದ್ದೀರಾ ಎಂದರೆ ಇಲ್ಲ.

ನಿಡಿ.3 ರ ಆರ್ ಟಿಸಿಯಲ್ಲಿ ತರಿ ಮಾತ್ರ ನಮೂದಿಸಿರುತ್ತಾರೆ, ತೋಟ ಮತ್ತು ಮನೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮನೆ ಪತ್ರದಲ್ಲಿ ನಮೂದಿಸಿದ್ದಾರೆ ಎನ್ನುತ್ತಾರೆ.

ರಾಮಣ್ಣನವರು ವಾಸವಿರುವ ಮನೆಗೂ ಹಾಗೂ ಸರ್ವೆ ನಂಬರ್ 25 ರ 1 ಎಕರೆ, 19 ಗುಂಟೆ ಜಮೀನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ರಾಮಣ್ಣನವರು ಸದರಿ ಮನೆಯಲ್ಲಿ ವಾಸವಿಲ್ಲ ಎನ್ನುತ್ತಾರೆ.

ರಾಮಣ್ಣನವರು ದಾವಾ ಎ ಶೆಡ್ಯೂಲ್ ನಲ್ಲಿ ವಾಸವಿದ್ದರೂ ಸಹ ಅವರು ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಗ್ರಾಮ ಪಂಚಾಯಿತಿಗೆ ನನ್ನ ತಾಯಿ ಮಾಡಿದ ವಿಲ್ಲನ್ನು ಹಾಜರುಪಡಿಸಿದಾಗ ರಾಮಣ್ಣನವರು ತಕರಾರುಗಳನ್ನು ಸಲ್ಲಿಸಿದಾಗ, ಸದರಿ ವಿಲ್ಲನ್ನು ರುಜುವಾತುಪಡಿಸಲು ಹಾಗೂ ನನ್ನ ಪರವಾಗಿ ಘೋಷಣೆ ಮಾಡಲು ನಾನು ನ್ಯಾಯಾಲಯದ ಮುಂದೆ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಆ ರೀತಿ ರಾಮಣ್ಣನವರು ಸದರಿ ವಿಲ್ ಗೆ ತಕರಾರು ಸಲ್ಲಿಸಿದಾಗ ನ್ಯಾಯಾಲಯದ ಮುಂದೆ ನಿಮ್ಮ ಹಕ್ಕನ್ನು ಸ್ಥಾಪಿಸಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾವು ಯಾಕೆ ದಾವೆ ಹಾಕಬೇಕು

ಎನ್ನುತ್ತಾರೆ.

ನನ್ನ ತಾಯಿಯವರು ತನ್ನ ಜಮೀನಿಗೆ ಸಂಬಂಧಪಟ್ಟಂತೆ ಬ್ಯಾಂಕಿನ ವ್ಯವಹಾರಗಳು, ಸೊಸೈಟಿ ವ್ಯವಹಾರಗಳು ಹಾಗೂ ಇತರ ವ್ಯವಹಾರಗಳನ್ನು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಓದು ಬರಹ ಗೊತ್ತಾಗುತ್ತಿರಲಿಲ್ಲ ಎಂದರೆ ನನ್ನ ತಾಯಿ ಅಕ್ಷರ ಜ್ಞಾನ ಇರಲಿಲ್ಲ ಆದರೆ ವ್ಯಾವಹಾರಿಕ ಜ್ಞಾನ ಇತ್ತು. ನನ್ನ ತಾಯಿ ಯಾವುದೇ ವ್ಯವಹಾರ ಮಾಡಬೇಕಾದರೆ ಅಕ್ಷರಸ್ಥರಿಂದ ಓದಿ ತಿಳಿದುಕೊಂಡು ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಸರ್ಕಾರಿ ಕಚೇರಿಗಳಿಗೆ ಕೊಟ್ಟಿರುವ ಅರ್ಜಿಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಯಾವುದಾದರೂ ವ್ಯವಹಾರ ಮಾಡುವುದಾದರೆ ನನ್ನ ತಾಯಿ ನಮ್ಮನ್ನು ಕೇಳಿ ಮಾಡುತ್ತಿದ್ದರು. ದಾಖಲಾತಿಗಳನ್ನು ನೋಡಿ ಸರಿಯಿದೆ ಎಂದು ನಾನು ತಿಳಿಸಿದ ಮೇರೆಗೆ ನನ್ನ ತಾಯಿ ವ್ಯವಹಾರವನ್ನು ಮುಂದುವರೆಸುತ್ತಿದ್ದರು. ನಾನು ಹಾಗೂ ಲಕ್ಷ್ಮಣ ರವರು ದಾಖಲಾತಿಗಳು ಸರಿಯಿವೆ ಎಂದು ಹೇಳಿದ ನಂತರ ನನ್ನ ತಾಯಿ ಸಮಾಧಾನವಾಗಿ ದಾಖಲಾತಿಗಳ ಮೇಲೆ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು, ಅವರಿಗೆ ನಮ್ಮ ಮೇಲೆ ನಂಬಿಕೆಯಿತ್ತು. ನನ್ನನ್ನು ಹಾಗೂ ಲಕ್ಷ್ಮಣರವರನ್ನು ಹೊರತುಪಡಿಸಿ ನನ್ನ ತಾಯಿಯವರು ಯಾವುದೇ ವ್ಯವಹಾರಗಳನ್ನು ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಅವರು ನಮ್ಮ ಜೊತೆಯಲ್ಲಿ ಇರುವುದರಿಂದ ನಮ್ಮನ್ನು ಕೇಳಿ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು ಎನ್ನುತ್ತಾರೆ.

ನಿಡಿ.5 ಮತ್ತು 6 ವಿಲ್ ಗಳನ್ನು ನಾನು ಹಾಗೂ ಲಕ್ಷ್ಮಣ ಅವರು ಸೇರಿಕೊಂಡು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು 1983 ರಿಂದ ನಾನೇ ಅವರನ್ನು ನೋಡಿಕೊಂಡಿರುತ್ತೇನೆ, ಅವರ ಖರ್ಚು ವೆಚ್ಚಗಳನ್ನು ನಾನು ವಹಿಸಿಕೊಂಡಿರುತ್ತೇನೆ, ಅವರೇ ಸ್ವಂತ ಇಚ್ಛೆಯಿಂದ ಸದರಿ ವಿಲ್‌ಗಳನ್ನು ನನ್ನ ಪರವಾಗಿ ಮಾಡಿಕೊಟ್ಟಿರುತ್ತಾರೆ.

ಕೆ.ಸಿ. ವಿಜೇಂದ್ರ ಅವರು ನಮ್ಮ ಊರುಮನೆಯವರು, ಅವರು ಸಂಬಂಧಿಕರಲ್ಲ. ಅವರು ಪರಿಚಯ ಮಾತ್ರ ಇರುತ್ತಾರೆ. ಸುಂಕುರ್ಡಿ ಜಗದೀಶ್ ಅವರು ನಮ್ಮ ಸಂಬಂಧಿಕರಲ್ಲ.

ನಿಡಿ.5 ಮತ್ತು 6 ರಂತೆ ನನ್ನ ತಾಯಿ ನನ್ನ ಪರವಾಗಿ ಯಾವುದೇ ವಿಲ್ಲನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ರಿಜಿಸ್ಟರ್ ಆಗುವ ಸಮಯದಲ್ಲಿ ಎಲ್ಲಾ ವಿಚಾರಗಳೂ ನನ್ನ ಗಮನದಲ್ಲಿತ್ತು. ಸದರಿ ವಿಲ್ ಗಳಲ್ಲಿ ಬರೆದಿರುವ ಅಂಶಗಳನ್ನು ನಾನು ಹಾಗೂ ಉಪನೊಂದಾಣಾಧಿಕಾರಿಗಳು ಓದಿ ನನ್ನ ತಾಯಿಗೆ ತಿಳಿಸಿರುತ್ತೇವೆ. ಸದರಿ ವಿಲ್ ಗಳಲ್ಲಿ ಬರೆದಿರುವ ಅಂಶಗಳು ಸರಿಯಿವೆ ಎಂದು ಹೇಳಿ ನಾನು ಅವರಿಗೆ ಮನದಟ್ಟು ಮಾಡಿರುತ್ತೇನೆ ಎಂದರೆ ಸರಿ.

ನಿಡಿ.6 ವಿಲ್ ನಲ್ಲಿ ತಾರೀಖಿನ ಮೇಲೆ ಬಿಳಿ ಬಣ್ಣ ಹಚ್ಚಿ ತಿದ್ದುಪಡಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಅದನ್ನು ಅವರಿಗೇ ಕೇಳಬೇಕು ಎನ್ನುತ್ತಾರೆ.

ಎರಡೂ ವಿಲ್ ಗಳನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ವಾದಿಗೆ ಕೂಡಾ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ದಿನಾಂಕ: 01/09/2022 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಓ

ಸಹಿ/-xxx
(ಐಶ್ವರ್ಯ ಚಿದಾನಂದ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಸಾಕ್ಷಿಯ ಸಹಿಃ ಪ್ರ.ದ.ನ್ಯಾ.ದಂಃ ಕೊಪ್ಪ.